**ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ರಂತೆ ದಿನಾಂಕ:11-05-2022 ರಂದು ಹಗದೂರು ವಾರ್ಡ್ ಸಂ: 84ರ ವಾರ್ಡ್ ಕಮಿಟಿ ಸಭೆಯನ್ನು ವಾರ್ಡ್ ಕಛೇರಿ-ಹಗದೂರು ಇಲ್ಲಿ ಶ್ರೀ.ಕೆ.ಎಸ್.ಜಯರಾಜು, ಸಹಾಯಕ ಕಾರ್ಯಪಾಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡುವಳಿಗಳು:**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ**

1. ಶ್ರೀ.ಕೆ.ಎಸ್.ಜಯರಾಜು, ಸಹಾಯಕ ಕಾರ್ಯಪಾಕ ಅಭಿಯಂತರರು, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಶಶಿಧರ್, ಸಹಾಯಕ ಕಾರ್ಯಪಾಕ ಅಭಿಯಂತರರು, ರ.ಮೂ.ಭೂ.ಸೌ_ಬಿಬಿಎಂಪಿ.
3. ಶ್ರೀ.ಬಸವರಾಜ್.ಕೆ.ಟಕ್ಕಳಕಿ, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
4. ಡಾ॥ ಸನಾ, ವೈಧ್ಯಾಧಿಕಾರಿಗಳು ಹಗದೂರು ಆರೋಗ್ಯ ಕೇಂದ್ರ
5. ಡಾ॥ ಸುಮತಿ, ವೈಧ್ಯಾಧಿಕಾರಿಗಳು ಸಿದ್ದಾಪುರ ಆರೋಗ್ಯ ಕೇಂದ್ರ
6. ಶ್ರೀ.ಪ್ರಕಾಶ್, ಹಿರಿಯ ಆರೋಗ್ಯ ನಿರೀಕ್ಷಕರರು ಶ್ರೀ.ಸೋಮಶೇಖರ್ ಕಿರಿಯ ಆರೋಗ್ಯ ನಿರೀಕ್ಷಕರರು, ವಾರ್ಡ್ ನಂ: 84 ಹಗದೂರು, ಬಿ.ಬಿ.ಎಂ.ಪಿ
7. ಶ್ರೀ.ಸುಧಾಕರರ್ ಮತ್ತು ಶ್ರೀ.ಶಿವಕುಮಾರ್, ಆರೋಗ್ಯ ಸಹಾಯಕರು, ಆರೋಗ್ಯ ಕೇಂದ್ರ
8. ಶ್ರೀ.ರವಿಚಂದ್ರ, ಸಹಾಯಕ ಅಭಿಯಂತರರು, (ರ.ಮೂ.ಭೂ.ಸೌ_ಬಿಬಿಎಂಪಿ)
9. ಹಗದೂರು ವಾರ್ಡಿನ ಶಕ್ತಿ ಕೇಂದ್ರದವರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ದಿ ಸಂಘದವರು ಮತ್ತು ಸಾರ್ವಜನಿಕರು

1. ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. ವೈಟ್‌ಫೀಲ್ಡ್ ಬೋರ್‌ವೆಲ್ ರಸ್ತೆಯಿಂದ ನಲ್ಲೂರಹಳ್ಳಿ ವರೆಗಿನ ರಸ್ತೆಯ ಬದಿ ಸಸಿಗಳನ್ನು ನೆಡುವುದು.

3. ಹಗದೂರು ವಾರ್ಡ್‌ನ ಎಲ್ಲಾ ರಸ್ತೆ ಬದಿಯಲ್ಲಿ ಸಸಿಗಳನ್ನು ನೆಡುವುದು.

4. ಪ್ರಿಸ್ಟೀಜ್ ಓಜೋನ್ ಕಾಂಪೌಂಡ್ ಗೋಡೆ ಬದಿಯಲ್ಲಿ ಬೆಂಕಿ ಹಾಕುವುದನ್ನು ನಿಲ್ಲಿಸುವುದು ಹಾಗೂ ಚರಂಡಿಯಲ್ಲಿ ನಿಂತ ನೀರನ್ನು ಸರಾಗವಾಗಿ ಹರಿಯುವಂತೆ ಮಾಡಲು ಹೂಳು ಮತ್ತು ಡೆಬ್ರೀಸ್ ತೆಗೆಯುವುದು.

5. ಹಗದೂರು ವಾರ್ಡ್‌ನ ಪ್ರಮುಖ ರಸ್ತೆಗಳಾದ ವೈಟ್‌ಫೀಲ್ಡ್ ಮುಖ್ಯರಸ್ತೆ ಗಣೇಶ ದೇವಸ್ಥಾನದಿಂದ ವರ್ತೂರು ಕೋಡಿ, ವರ್ತೂರು ಕೋಡಿಯಿಂದ ಸಿದ್ದಾಪುರ ಗ್ರಾಮದ ವರೆಗೆ ಹಾಗೂ ಇಮ್ಮಡಿಹಳ್ಳಿ ಮುಖ್ಯರಸ್ತೆ ಮೈಯೂರ ಬೇಕರಿಯಿಂದ ಇಮ್ಮಡಿಹಳ್ಳಿ ಗ್ರಾಮದವರೆಗೆ ಪುಟ್‌ಪಾತ್ ತೆರೆವುಗೊಳಿಸುವುದು ಹಾಗೂ ಕೇಬಲ್ ಕಟ್ಟಿಂಗ್ ಮಾಡುವುದು.

6. ಪಾರ್ತು ಪ್ಯೆಡ್ ಅಪಾರ್ಟ್‌ಮೆಂಟ್‌ನಲ್ಲಿ 04 ಕೋವಿಡ್ ಪ್ರಕರಣಗಳು ದಾಖಲಾಗಿರುತ್ತದೆ. ಇದರಿಂದ ಮುನ್ನೆಚ್ಚರಿಕೆ ಕ್ರಮ ವಹಿಸುವುದು.

7. ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನರ್ಸ್ ನೇಮಿಸುವುದು.

8. ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ 03 ಕಂಟೈನರ್ ಹಾಕಲು ಜಾಗ ಒದಗಿಸುವುದು.

9. ಹಗದೂರು ಎಲ್ಲಾ ಅಪಾರ್ಟ್‌ಮೆಂಟ್‌ಗಳಿಗೆ ಕೋವಿಡ್ ನೋಟೀಸ್ ಜಾರಿ ಮಾಡುವುದು.

10. ಹಗದೂರು ವಾರ್ಡ್‌ನ ಎಲ್ಲಾ ರಸ್ತೆಗಳ ಬದಿ ಇರುವ ಚರಂಡಿಗಳಿನ ಹೂರಳನ್ನು /ಡೆಬ್ರೀಸ್‌ನ್ನು ತೆರವುಗೊಳಿಸಿ, ಮಳೆ ನೀರು ಸರಾಗವಾಗಿ ಹರಿಯುವಂತೆ ಮಾಡುವುದು.

11. ಹಗದೂರು ವಾರ್ಡ್ ನಂ.84ರ 2019-20ನೇ ಸಾಲಿನ ಪಿ-2021 ರಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದವರ & ಲೆಕ್ಕಶೀರ್ಷಿಕೆ ಪಿ-2340 ರಡಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರ ಮನೆಗಳ ನಿರ್ಮಾಣ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಈ ಕೆಳಕಂಡಂತೆ ಸರ್ವಾನುಮತದಿಂದ ಆಯ್ಕೆ ಮಾಡಲಾಗಿರುವ ಫಲಾನುಭವಿಗಳ ಆಯ್ಕೆ ಪಟ್ಟಿ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಫಲಾನುಭವಿಯ ಹೆಸರು | ಗ್ರಾಮ | ಎಸ್.ಸಿ/ಎಸ್.ಟಿ / ಬಿ.ಸಿ.ಎಂ |
|---|---|---|---|
| 1 | ರತ್ನಮ್ಮ ಕೋಂ ನಾರಾಯಣಪ್ಪ | ನಲ್ಲೂರಹಳ್ಳಿ | ಎಸ್.ಸಿ/ಎಸ್.ಟಿ |
| 2 | ಎಂ.ಶಂಕರ್ ಬಿನ್ ಮುನಿಯಪ್ಪ | ನಲ್ಲೂರಹಳ್ಳಿ | ಎಸ್.ಸಿ/ಎಸ್.ಟಿ |
| 3 | ಪಿ.ಶ್ರೀನಿವಾಸ್ ಬಿನ್ ಲೇ.ಪಾಪಯ್ಯ | ನಲ್ಲೂರಹಳ್ಳಿ | ಎಸ್.ಸಿ/ಎಸ್.ಟಿ |
| 4 | ವಿ.ಕೃಷ್ಣಪ್ಪ ಬಿನ್ ಲೇ.ವೆಂಕಟರಮಣಪ್ಪ | ನಲ್ಲೂರಹಳ್ಳಿ | ಎಸ್.ಸಿ/ಎಸ್.ಟಿ |
| 5 | ಭಾಗ್ಯಮ್ಮ ಕೋಂ ವೆಂಕಟೇಶ್ | ನಲ್ಲೂರಹಳ್ಳಿ | ಎಸ್.ಸಿ./ಎಸ್.ಟಿ |
| 6 | ಯಶೋಧ ಕೋಂ ಶ್ರೀನಿವಾಸ್ | ನಲ್ಲೂರಹಳ್ಳಿ | ಎಸ್.ಸಿ/ಎಸ್.ಟಿ |
| 7 | ಮಹೇಂದ್ರ.ಎಂ. ಬಿನ್ ಮದೂರಪ್ಪ | ಸಿದ್ದಾಪುರ | ಎಸ್.ಸಿ/ಎಸ್.ಟಿ |
| 8 | ಎಂ.ಸರಸ್ವತಿ ಕೋಂ ವೆಂಕಟೇಶ್ | ಸಿದ್ದಾಪುರ | ಎಸ್.ಸಿ/ಎಸ್.ಟಿ |
| 9 | ವೆಂಕಟೇಶ್ ಬಿನ್ ಚಿಕ್ಕ ಮುನಿಯಪ್ಪ | ಇಮ್ಮಡಿಹಳ್ಳಿ | ಎಸ್.ಸಿ/ಎಸ್.ಟಿ |
| 10 | ಮುನಿರತ್ನಮ್ಮ ಕೋಂ ನಾರಾಯಣಪ್ಪ | ವಿನಾಯಕನಗರ | ಎಸ್.ಸಿ/ಎಸ್.ಟಿ |
| 11 | ಶಾಂತಮ್ಮ ಮತ್ತು ಮಹೇಶ್.ಎನ್ | ಇಮ್ಮಡಿಹಳ್ಳಿ | ಬಿ.ಸಿ.ಎಂ. |
| 12 | ಹರೀಶ್ ಬಿನ್ ರಾಮಯ್ಯ | ನಾಗೊಂಡನಹಳ್ಳಿ | ಬಿ.ಸಿ.ಎಂ. |
| 13 | ಟಿ.ವೆಂಕಟೇಶ್ ಬಿನ್ ಲೇ.ಜೆ.ಬಿ.ತಿಮ್ಮರಾಯಪ್ಪ | ನಾಗೊಂಡನಹಳ್ಳಿ | ಬಿ.ಸಿ.ಎಂ. |
| 14 | ಶಭೀರ್ ಬಿನ್ ಅಬ್ದುಲ್ ಮಜಿದ್ | ಗಾಂಧೀಪುರ | ಬಿ.ಸಿ.ಎಂ. |
| 15 | ಶಾಂತಕುಮಾರಿ.ಎನ್ ಕೋಂ ರಮೇಶ್ | ರಾಮಗೊಂಡನಹಳ್ಳಿ | ಬಿ.ಸಿ.ಎಂ. |

**ವಾರ್ಡ್ ಕಮಿಟಿ ನೋಡಲ್ ಅಧಿಕಾರಿ ಮತ್ತು ಕಾರ್ಯದರ್ಶಿಗಳು, ನೌಕರರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಹಗದೂರು ವಾರ್ಡ್ ನಂ:84 ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು**

ಹಗದೂರು ವಾರ್ಡ ನಂ:84ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ.ಕೆ.ಎಸ್.ಜಯರಾಜು, ಸಹಾಯಕ ಕಾರ್ಯಪಾಕ ಅಭಿಯಂತರರು ಹಾಗೂ ನೊಡಲ್ ಅಧಿಕಾರಿಗಳು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Sd/-

**ಕಾರ್ಯದರ್ಶಿ**
**ಸಹಾಯಕ ಅಭಿಯಂತರರು**
**ವಾರ್ಡ್ ನಂ: 84 ಹಗದೂರು**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಡಿ.ಹೆಚ್.ಓ ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಸೂಕ್ತ ಮಾಹಿತಿ/ಕ್ರಮಕ್ಕಾಗಿ ಸಲ್ಲಿಸಿದೆ.
4. ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಕ್ರಮಕ್ಕಾಗಿ.
5. ಎಲ್ಲಾ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
6. ಕಛೇರಿ ಪ್ರತಿ.